# ‘ವೈದ್ಯಕೀಯ ಕಲಿಕೆ, ಸಂಶೋಧನೆಗೆ ಆದ್ಯತೆ’

## ‘ನೀಟ್’ ಪರೀಕ್ಷೆಯಲ್ಲಿ ಮೊದಲಿಗ ಬೆಂಗಳೂರಿನ ಕಲ್ಯಾಣ್ ಸಂದರ್ಶನ

ನೀಟ್ ಪರೀಕ್ಷೆಯಲ್ಲಿ ಮೊದಲ ರ‍್ಯಾಂಕ್ ಪಡೆದವರಲ್ಲಿ ಕಲ್ಯಾಣ್ ವಿ. ಒಬ್ಬರು. ವೈದ್ಯಕೀಯ ವಿಜ್ಞಾನದಲ್ಲಿ ವಿಜ್ಞಾನಿ ಆಗಲೇಬೇಕು ಎಂದು ಪಟ್ಟು ಹಿಡಿದು, 720ಕ್ಕೆ 720 ಅಂಕಗಳನ್ನು ಗಳಿಸಿ ದೇಶದ ಗಮನಸೆಳೆದಿದ್ದಾರೆ. ಓದಿನ ಕ್ರಮದ ಬಗ್ಗೆ ಕಲ್ಯಾಣ್ ವಿ. ‘ಸುಧಾ’ ಜೊತೆ ತಮ್ಮ ಅನುಭವ ಹಂಚಿಕೊಂಡಿದ್ದಾರೆ.

■ ರಾಘವೇಂದ್ರ ಕೆ.

◆ **ಸಿಇಟಿ, ನೀಟ್, ಬೋರ್ಡ್ ಪರೀಕ್ಷೆಗಳಿಗೆ ಏಕಕಾಲದಲ್ಲಿ ಹೇಗೆ ಸಿದ್ಧತೆ ಮಾಡ್ತಿದ್ರಿ?**

ನಿತ್ಯವೂ ತಪ್ಪದೇ ಓದುತ್ತಿದ್ದೆ. ಕಾಲೇಜಿನಲ್ಲಿ ಪ್ರತಿವಾರ ಪರೀಕ್ಷೆ ಇರುತ್ತಿತ್ತು. ಹಾಗಾಗಿ ಆ ವಾರದಲ್ಲಿ ಮುಗಿದಿದ್ದ ಸಿಲೆಬಸ್‌ಗೆ ಸಿದ್ಧತೆಯೂ ಮುಗಿದಿರುತ್ತಿತ್ತು. ಬೋರ್ಡ್ ಪರೀಕ್ಷೆಗೆ ಎರಡು ತಿಂಗಳು ಬಾಕಿ ಇರುವಾಗಲೇ ನನ್ನ ಓದನ್ನು ಮುಗಿಸಿದ್ದೆ. ಎಲ್ಲ ವಿಷಯಗಳಿಗೆ ಸಂಬಂಧಿಸಿದಂತೆ ಕೀ ಪಾಯಿಂಟ್ಸ್‌ಗಳ ಪುಟ್ಟ ನೋಟ್ಸ್ ಸಿದ್ಧಮಾಡಿದ್ದೆ. ಅದು ವೇಗವಾಗಿ ಮತ್ತು ನಿರಂತರವಾಗಿ ಪುನರಾವರ್ತನೆ ಮಾಡಲು ಸಹಾಯವಾಗುತ್ತಿತ್ತು. ಪುನರ್ ಅಧ್ಯಯನ ಮಾಡುವುದು ನನ್ನ ಎಲ್ಲ ಪರೀಕ್ಷೆಗಳಿಗೂ ಸಹಕಾರಿ ಆಯಿತು. ಬೋರ್ಡ್ ಪರೀಕ್ಷೆಯ ಜೊತೆಗೆ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ), ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್) ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ಸಿದ್ಧತೆಯನ್ನು ಏಕಕಾಲದಲ್ಲಿ ಮಾಡುವುದು ಅನಿವಾರ್ಯ. ಅದಕ್ಕೆ ಮಾದರಿ ಪ್ರಶ್ನೆಪತ್ರಿಕೆಗಳನ್ನು ನೋಡಿಕೊಳ್ಳಬೇಕು. ಎನ್‌ಸಿಆರ್‌ಟಿ ಪಠ್ಯಪುಸ್ತಕದ ಜೊತೆ ನಮ್ಮ ಕಾಲೇಜಿನಲ್ಲಿ ನೀಡುತ್ತಿದ್ದ ನೋಟ್ಸ್ ಅಷ್ಟನ್ನೇ ಓದುತ್ತಿದ್ದೆ. ಇದನ್ನು ಬಿಟ್ಟು ಬೇರೆ ಇನ್ನೇನೂ ಓದುತ್ತಿರಲಿಲ್ಲ.

◆ **ಮುಂದಿನ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದಂತೆ ನಿಮ್ಮ ಆಯ್ಕೆ ಯಾವುದು?**

ಸಿಇಟಿಯಲ್ಲಿ ಪಶು ವೈದ್ಯಕೀಯ (ಬಿ.ವಿ.ಎಸ್‌ಸಿ), ಬಿ. ಫಾರ್ಮಾ, ಫಾರ್ಮಾ ಡಿ (ಫಾರ್ಮಸಿ) ಮತ್ತು ಬಿ.ಎಸ್‌ಸಿ ನರ್ಸಿಂಗ್ ಪ್ರವೇಶಕ್ಕೆ ಒಳ್ಳೆಯ ರ‍್ಯಾಂಕ್ ಪಡೆದಿದ್ದೇನೆ. ಜೆಇಇ, ಜೆಇಇ ಅಡ್ವಾನ್ಸ್ ಪರೀಕ್ಷೆಯನ್ನೂ ಬರೆದಿದ್ದು ಅದರ ಫಲಿತಾಂಶ ಬರಬೇಕಿದೆ. ದೆಹಲಿಯಲ್ಲಿರುವ ದೇಶದ ಪ್ರತಿಷ್ಠಿತ ಅಖಿಲ ಭಾರತ ವೈದ್ಯವಿಜ್ಞಾನ ಸಂಸ್ಥೆಯಲ್ಲಿ (ಏಮ್ಸ್) ಮೆಡಿಕಲ್ ಓದುವುದು ನನ್ನ ಆಯ್ಕೆ. ನಂತರ ವೈದ್ಯಕೀಯ ಕ್ಷೇತ್ರದಲ್ಲಿ ಸಂಶೋಧನೆಯಲ್ಲಿ ತೊಡಗಬೇಕು. ಅದರಲ್ಲಿ ಯಾವ ವಿಷಯದಲ್ಲಿ ತೊಡಗುತ್ತೇನೆ ಎನ್ನುವ ಬಗ್ಗೆ ಇನ್ನೂ ಗೊತ್ತಿಲ್ಲ. ಸಂಶೋಧನೆ ನನ್ನ ಮೊದಲ ಆದ್ಯತೆ ಎನ್ನುವುದು ಮಾತ್ರ ಸ್ಪಷ್ಟ.

◆ **ನಿಮ್ಮ ಕನಸು ಏನಿತ್ತು? ಅಧ್ಯಯನಕ್ಕೆ ಸಮಯದ ಪರಿಪಾಲನೆ ಹೇಗೆ ಮಾಡಿದ್ರಿ?**

ಇದೇ ಆಗುತ್ತೆ ಎಂದು ಖಚಿತವಾಗಿ ಗೊತ್ತಿರಲಿಲ್ಲ. ಏನೇ ಆದರೂ ನಾನು ವೈದ್ಯಕೀಯ ಕ್ಷೇತ್ರದಲ್ಲಿ ಸಂಶೋಧಕ ಆಗಬೇಕು ಎನ್ನುವ ಸ್ಪಷ್ಟತೆ ಇತ್ತು.

ಕಾಲೇಜಿನ ಸಮಯದ ನಂತರ ನಿತ್ಯ ಮೂರರಿಂದ ನಾಲ್ಕು ಗಂಟೆ ಓದಲು ಮೀಸಲಿಟ್ಟಿದ್ದೆ. ಬೆಳಿಗ್ಗೆ ಎದ್ದು ಓದುವುದು ನನಗೆ ಅಷ್ಟು ಸರಿಯಾಗುತ್ತಿರಲಿಲ್ಲ. ನಿತ್ಯ ರಾತ್ರಿ ಓದಿದ ನಂತರವೇ ಮಲಗುತ್ತಿದ್ದೆ. ನನ್ನ ವೇಳಾಪಟ್ಟಿಯಂತೆ ಅವತ್ತು ಎಷ್ಟು ಓದಲು ಸಾಧ್ಯವೋ ಅದನ್ನು ಲೆಕ್ಕಾಚಾರ ಹಾಕಿ ವಿಷಯವನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದೆ. ಒಂದು ವಿಷಯವನ್ನು ಹಿಡಿದರೆ ಅದನ್ನು ಪೂರ್ಣ ಮಾಡುತ್ತಿದ್ದೆ.



ಬೇಜಾರಾದಾಗ ಗೆಳೆಯರ ಜೊತೆ ಹರಟೆ ಹೊಡೀತಿದ್ದೆ. ಹೊರಗಡೆ ಹೋಗಲು ಸಾಧ್ಯ ಆದರೆ ಹೋಗ್ತಿದ್ದೆ. ವಿಡಿಯೊ ಗೇಮ್ಸ್ ಆಡುತ್ತಿದ್ದೆ. ಮಾನಸಿಕ ಸ್ಥಿತಿಯನ್ನು ಪಾಸಿಟಿವ್ ಆಗಿ ಇಟ್ಟುಕೊಂಡಿರುತ್ತಿದ್ದೆ. ಊಟೋಪಚಾರದ ಡಯಟ್ ನಿರ್ದಿಷ್ಟವಾಗಿ ಹೀಗೇ ಇರಬೇಕು ಎಂದು ಮಾಡುತ್ತಿರಲಿಲ್ಲ. ಮನೆಯಲ್ಲಿ ಏನು ಬಡಿಸುತ್ತಾರೋ ಅದನ್ನೇ ತಿನ್ನುತ್ತಿದ್ದೆ.

◆ **ಸಿಇಟಿ–ನೀಟ್ ಪ್ರಶ್ನೆಪತ್ರಿಕೆಗಳಲ್ಲಿ ಏನು ವ್ಯತ್ಯಾಸ?**

ಅವುಗಳಲ್ಲಿ ಗುರುತಿಸುವಂತಹ ವ್ಯತ್ಯಾಸ ಏನೂ ಇಲ್ಲ. ಸಾಮಾನ್ಯವಾಗಿ ಒಂದೇ ರೀತಿ ಇರುತ್ತವೆ. ವಿಷಯಾವಾರು ಹೇಳುವುದಾದರೆ ಜೀವಶಾಸ್ತ್ರದಲ್ಲಿ ಸಿಇಟಿಯಲ್ಲಿ ನೇರವಾದ ಪ್ರಶ್ನೆ ಕೇಳಿದರೆ ನೀಟ್‌ನಲ್ಲಿ ಅದನ್ನೇ ಸ್ವಲ್ಪ ಸಂಕೀರ್ಣಗೊಳಿಸಿರುತ್ತಾರೆ. ಎಲ್ಲ ಪಠ್ಯದಲ್ಲಿ ಇರುವುದರಿಂದ ನಾವು ಅದನ್ನು ಓದಿರುತ್ತೇವೆ.

◆ **ನಿಮ್ಮ ಪರಿಚಯ ಹೇಳಿ?**

ಅಪ್ಪ ವಿ. ವೆಂಕಟೇಶಪ್ಪ ಸಾಫ್ಟ್‌ವೇರ್ ಎಂಜಿನಿಯರ್, ಅಮ್ಮ ಲಕ್ಷ್ಮಿ ಗೃಹಿಣಿ, ರೋಹಿತಾ ಅಂತ ತಂಗಿ ಇದ್ದಾಳೆ. ಆಕೆ 8ನೇ ತರಗತಿ ಓದುತ್ತಿದ್ದಾಳೆ. ನಾವು ಕೆ.ಆರ್. ಪುರಂನಲ್ಲಿದ್ದೇವೆ. ಶ್ರೀ ಚೈತನ್ಯ ಟೆಕ್ನೊ ಸ್ಕೂಲ್‌ನಲ್ಲಿ 12ನೇ ತರಗತಿಯವರೆಗೆ ಓದಿದ್ದೇನೆ. 12ನೇ ತರಗತಿ (ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ ಮತ್ತು ದೈಹಿಕ ಶಿಕ್ಷಣ) ಬೋರ್ಡ್ ಪರೀಕ್ಷೆಯಲ್ಲಿ ಶೇ. 96 ಅಂಕಗಳನ್ನು ಪಡೆದಿದ್ದೆ.

◆ **ಎಂಜಿನಿಯರಿಂಗ್ ನಿಮಗೆ ಇಷ್ಟವಿಲ್ಲವೆ?**

ಬಿಇ ಹೋಗಲು ಇಷ್ಟ ಇಲ್ಲ ಎಂದರೆ ತಪ್ಪಾಗುತ್ತೆ. ನನಗೆ ವೈದ್ಯಕೀಯ ವಿಜ್ಞಾನದಲ್ಲಿ ಫೋಕಸ್ ಇರುವುದರಿಂದ ಅದನ್ನು ಆಯ್ಕೆ ಮಾಡಲಿಲ್ಲ. ದೇಶಾದ್ಯಂತ ಸುಮಾರು 25 ಲಕ್ಷ ಮಂದಿ ನೀಟ್ ಪರೀಕ್ಷೆಯನ್ನು ಬರೆದಿದ್ದರು. ನನ್ನ ಗುರಿ ಸ್ಪಷ್ಟವಾಗಿ ಇದ್ದುದರಿಂದ ಖಂಡಿತ ಒಳ್ಳೆಯ ರ‍್ಯಾಂಕ್ ಪಡೆಯುತ್ತೇನೆ ಎನ್ನುವ ಭರವಸೆ ಇತ್ತು. ಹಾಗಾಗಿ ಗಣಿತದ ಬದಲಿಗೆ ದೈಹಿಕ ಶಿಕ್ಷಣವನ್ನು ಆಯ್ಕೆ ಮಾಡಿಕೊಂಡಿದ್ದೆ. ನನ್ನ ಆಸೆಯಂತೆ ಉತ್ತಮ ಅಂಕ ಬಂದಿದೆ. ನನಗೂ ಖುಷಿ ಆಗಿದೆ. ಬಂಧು ಬಳಗವೂ ಸಂತೋಷವಾಗಿದೆ. ■